SRI SAIRAM COLLEGE OF ENGINEERING
Anekal, Bengaluru

# ಕನ್ನಡಪ್ರಭ

**Date: 23.08.2018** **Edition: Bengaluru**

## Newspaper - Kannada Prabha




ಆನೇಕಲ್‌ನ ಸಾಯಿರಾಂ ಎಂಜಿನಿಯರಿಂಗ್ ಕಾಲೇಜಿನ ಆಡಳಿತ ಮಂಡಳಿಯ ಡಾ.ಅರುಣ್ ಕುಮಾರ್ ಅವರು ಡಾ.ಲಿಯೋ ಮುತ್ತು ವಿದ್ಯಾರ್ಥಿ ವೇತನವನ್ನು ಅತಿ ಹೆಚ್ಚು ಅಂಕಗಳನ್ನು ಪಡೆದ ಕುಮಾರಿ ರಮ್ಯಾಗೆ ವಿತರಿಸಿದರು.

Page No.4

MJF. LN. LEO MUTHU
Founder Chairman - Sairam Institutions

Sairam INSTITUTIONS

Sri
# SAIRAM
## COLLEGE OF ENGINEERING
Anekal, Bengaluru

# ವಿಜಯವಾಣಿ
ಕನ್ನಡಿಗರ ಧ್ವನಿ

**Date: 19.08.2018** **Edition: Bengaluru (Gramanthara)**

## Newspaper - Vijayavani

# ಇಂಜಿನಿಯರ್ ಸೃಷ್ಟಿಯಲ್ಲಿ ದೇಶ ಮುಂದೆ

■ ವಿಜಯವಾಣಿ ಸುದ್ದಿಜಾಲ ಆನೇಕಲ್

ದೇಶವು ಜಿಡಿಪಿಯಲ್ಲಿ ಹಿಂದೆ ಇದ್ದರೂ ಪ್ರತಿ ವರ್ಷ 15 ಲಕ್ಷ ಇಂಜಿನಿಯರ್‌ಗಳನ್ನು ರೂಪಿಸುವ ಮೂಲಕ ಅಮೆರಿಕಗಿಂತಲೂ ಮುಂದಿದೆ ಎಂದು ಪ್ರಾಂಶುಪಾಲ ವೈ.ವಿಜಯಕುಮಾರ್ ಹೇಳಿದರು.

ಸಾಯಿರಾಂ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಶುಕ್ರವಾರ ಆಯೋಜಿಸಿದ್ದ ಪ್ರಥಮ ವರ್ಷದ ಬಿಇ ವಿದ್ಯಾರ್ಥಿಗಳ ಸ್ವಾಗತ ಸಮಾರಂಭದಲ್ಲಿ ಮಾತನಾಡಿದರು.

ಪದವೀಧರ ಇಂಜಿನಿಯರ್‌ಗಳು ಕೆಲಸ ಗಿಟ್ಟಿಸಿಕೊಳ್ಳಲು ಕಾಲೇಜಿನ ಸಂಶೋಧನ ಮತ್ತು ಅಭಿವೃದ್ಧಿ ಕೇಂದ್ರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಕಾಲೇಜು ಆಡಳಿತ ಮಂಡಳಿ ಪ್ರತಿನಿಧಿ ಡಾ.ಅರುಣ್ ಕುಮಾರ್ ಮಾತನಾಡಿ, ಕೇವಲ ಅಂಕ ಆಧಾರಿತ ಶಿಕ್ಷಣಕ್ಕೆ ಆದ್ಯತೆ ನೀಡದೆ ಕೌಶಲಾಧಾರಿತ ನೈಪುಣ್ಯತೆ ಮೈಗೂಡಿಸಿಕೊಳ್ಳಬೇಕು ಎಂದರು.

ಎಲೆಕ್ಟ್ರಾನಿಕ್ಸ್ ವಿಭಾಗದ ಮುಖ್ಯಸ್ಥ ಶಿವಪ್ರಕಾಶ್, ಉಪ ಪ್ರಾಂಶುಪಾಲ ಡಾ.ಷಡಾಕ್ಷರಪ್ಪ, ತಾಂಡವ ಕೃಷ್ಣ ಪೋಪುರಿ ಇದ್ದರು.



ಆನೇಕಲ್ ಸಾಯಿರಾಂ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಶುಕ್ರವಾರ ಆಯೋಜಿಸಿದ್ದ ಪ್ರಥಮ ವರ್ಷದ ಬಿಇ ವಿದ್ಯಾರ್ಥಿಗಳ ಸ್ವಾಗತ ಸಮಾರಂಭದಲ್ಲಿ ವಿದ್ಯಾರ್ಥಿ ವೇತನ ವಿತರಿಸಲಾಯಿತು.



MJF.LN. LEO MUTHU
Founder Chairman - Sairam Institutions

Sairam INSTITUTIONS

Sri **SAIRAM**
**COLLEGE OF ENGINEERING**
Anekal, Bengaluru

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**Date: 23.08.2018** **Edition: Bengaluru (Gramanthara)**

## Newspaper - Prajavani



ಕಾರ್ಯಕ್ರಮವನ್ನು ಡೆಲ್ ಸಂಸ್ಥೆಯ ನಿರ್ದೇಶಕ ತಾಂಡವ ಕೃಷ್ಣ ಪೋಪುರಿ ಉದ್ಘಾಟಿಸಿದರು

### ‘ಸವಾಲಿಗೆ ಉತ್ತರ ಕಂಡುಕೊಳ್ಳಿ’

ಪ್ರಜಾವಾಣಿ ವಾರ್ತೆ

**ಆನೇಕಲ್:** ಮಾಹಿತಿತಂತ್ರಜ್ಞಾನಕ್ಷೇತ್ರವು ಅತ್ಯಂತ ಸ್ಪರ್ಧಾತ್ಮಕವಾಗಿ ಬೆಳೆಯುತ್ತಿದ್ದು ಪೈಪೋಟಿಯನ್ನು ಎದುರಿಸಬೇಕಾದರೆ ವಿದ್ಯಾರ್ಥಿಗಳು ಉನ್ನತ ಕೌಶಲವನ್ನು ಬೆಳೆಸಿಕೊಂಡು ಸಂಶೋಧನಾ ಕ್ಷೇತ್ರದಲ್ಲಿ ಸಾಧನೆ ತೋರಿಸಬೇಕು. ಸವಾಲುಗಳಿಗೆ ಸಮರ್ಪಕ ಉತ್ತರ ಕಂಡುಕೊಂಡರೆ ಜಾಗತಿಕ ಮಾರುಕಟ್ಟೆಯಲ್ಲಿ ಸ್ಥಾನ ಗಳಿಸಲು ಸಾಧ್ಯ ಎಂದು ಡೆಲ್ ಸಂಸ್ಥೆಯ ನಿರ್ದೇಶಕ ತಾಂಡವ ಕೃಷ್ಣ ಪೋಪುರಿ ತಿಳಿಸಿದರು.

ಅವರು ತಾಲ್ಲೂಕಿನ ಗುಡ್ಡನಹಳ್ಳಿ ಸಮೀಪದ ಸಾಯಿರಾಮ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಪ್ರಥಮ ಬಿಇ ತರಗತಿಗಳ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ಶೈಕ್ಷಣಿಕ ಪ್ರಾರಂಭೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದರು.

ಮಾಹಿತಿ ತಂತ್ರಜ್ಞಾನ ಕ್ಷೇತ್ರ 25 ವರ್ಷಗಳಲ್ಲಿ ತನ್ನದೇ ಆದ ಹೆಜ್ಜೆ ಗುರುತುಗಳನ್ನು ಮೂಡಿಸಿದೆ. ಎಲ್ಲ ಕ್ಷೇತ್ರಗಳು ಡಿಜಿಟಲೀಕರಣವಾಗುವಲ್ಲಿ ಮಾಹಿತಿ ತಂತ್ರಜ್ಞಾನದ ಪಾತ್ರ ಅತ್ಯಂತ ಪ್ರಮುಖವಾಗಿದೆ ಎಂದು ತಿಳಿಸಿದರು.

ವಿದ್ಯಾರ್ಥಿಗಳು ಹೊಸ ಚಿಂತನೆಗಳನ್ನು ತಮ್ಮ ಕ್ಷೇತ್ರದಲ್ಲಿ ಅಳವಡಿಸಿಕೊಳ್ಳಬೇಕು. ತಜ್ಞರು ಮಂಡಿಸುವ ಶೈಕ್ಷಣಿಕ ಪ್ರಬಂಧಗಳನ್ನು ಅಧ್ಯಯನ ಮಾಡಬೇಕು. ಅಂತರರಾಷ್ಟ್ರೀಯ ಜರ್ನಲ್‌ಗಳನ್ನು ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು. ಇದರಲ್ಲಿ ಲೇಖನಗಳನ್ನು ಬರೆಯುವ ಮಟ್ಟಕ್ಕೆ ಸಂಶೋಧನೆಗಳು ಸಿದ್ಧವಾಗಬೇಕು ಎಂದರು.

ಕಾಲೇಜಿನ ಪ್ರಾಚಾರ್ಯ ಡಾ.ವೈ.ವಿಜಯ್‌ಕುಮಾರ್ ಮಾತನಾಡಿ, ಭಾರತವು ತನ್ನ ಜಿಡಿಪಿಯಲ್ಲಿ ಹಿಂದುಳಿದಿದ್ದರೂ ಪ್ರತಿ ವರ್ಷ 15 ಲಕ್ಷ ಎಂಜಿನಿಯರ್‌ಗಳನ್ನು ತಯಾರು ಮಾಡುವ ಮೂಲಕ ಅಮೆರಿಕಾ ದೇಶಕ್ಕಿಂತಲೂ ಮುಂದಿದೆ. ಬೇಡಿಕೆ ಮತ್ತು ಪೂರೈಕೆಯಲ್ಲಿ ಸಮತೋಲನ ತರಬೇಕಾದರೆ ವಿದ್ಯಾರ್ಥಿಗಳು ಕಾಲೇಜಿನ ಸಂಶೋಧನಾ ಮತ್ತು ಅಭಿವೃದ್ಧಿ ವಿಭಾಗವನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು. ಈ ಮೂಲಕ ಹೊರದೇಶಗಳು, ಹೊರರಾಜ್ಯಗಳಲ್ಲೂ ಅವಕಾಶಗಳನ್ನು ಪಡೆಯುವ ನಿಟ್ಟಿನಲ್ಲಿ ಕೆಲಸ ಮಾಡಬೇಕು ಎಂದರು.

ಕಾಲೇಜಿನ ಆಡಳಿತ ಮಂಡಳಿಯ ನಿರ್ದೇಶಕ ಡಾ.ಆರ್.ಅರುಣ್‌ಕುಮಾರ್ ಮಾತನಾಡಿ, ಮಹಾವಿದ್ಯಾಲಯವು ವಿದ್ಯಾರ್ಥಿ ಸ್ನೇಹಿಯಾಗಿ ಕೆಲಸ ಮಾಡುತ್ತಿದೆ. ಆಡಳಿತ ಮಂಡಳಿಯು ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಎಲ್ಲ ನೆರವು ನೀಡಲು ಬದ್ಧವಾಗಿದೆ ಎಂದರು.

ಈ ವರ್ಷ ಉನ್ನತ ಸಾಧನೆ ತೋರಿದ 46 ವಿದ್ಯಾರ್ಥಿಗಳಿಗೆ ಸುಮಾರು ₹ 10 ಲಕ್ಷ ವಿದ್ಯಾರ್ಥಿ ವೇತನ ನೀಡಲಾಗಿದೆ. ವಿದ್ಯಾರ್ಥಿಗಳು ಕೇವಲ ಅಂಕ ಗಳಿಕೆಯಿಂದ ಉದ್ಯೋಗಗಳನ್ನು ಪಡೆಯಲು ಸಾಧ್ಯವಿಲ್ಲ. ಅವರ ಸಂವಹನ ಕೌಶಲ, ಸಂಶೋಧನಾ ಮನೋಭಾ ಉನ್ನತ ಹುದ್ದೆಗಳನ್ನು ಪಡೆಯಲು ಅವಕಾಶವಿದೆ ಎಂದರು.

ಉಪಪ್ರಾಚಾರ್ಯ ಡಾ.ಷಡಕ್ಷರಪ್ಪ, ಕಾಲೇಜಿನ ಡಾ.ಶಿವಪ್ರಕಾಶ್, ಪಟೇಲ್, ಡಾ.ಗಂಗಾವತಿ ಹಾಜರಿದ್ದರು.

Page No.2

MJF.LN. LEO MUTHU
Founder Chairman - Sairam Institutions

Sairam INSTITUTIONS

Sri **SAIRAM**
**COLLEGE OF ENGINEERING**
Anekal, Bengaluru

# ವಿಜಯ ಕರ್ನಾಟಕ

**Date: 21.08.2018** **Edition: Bengaluru (Gramanthara)**

## Newspaper - Vijay Karnataka

# ‘ಕೌಶಲ್ಯವಿದ್ದರೆ ಉದ್ಯೋಗ’

**ಆನೇಕಲ್:** ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಕೇವಲ ಅಂಕಗಳ ಸಾಧನೆಯ ಮೇಲೆ ಉದ್ಯೋಗ ಗಳಿಸಲಾಗದು. ಕೌಶಲ್ಯಾಧಾರಿತ ನಿಪುಣತೆ ಇದ್ದರೆ ಸುಲಭವಾಗಿ ಕೆಲಸ ಗಿಟ್ಟಿಸಿಕೊಳ್ಳಬಹುದು ಎಂದು ಡೆಲ್ ಇಎಂಸಿ ಇಂಡಿಯಾದ ನಿರ್ದೇಶಕ ತಾಂಡವ ಕೃಷ್ಣ ಪೋಪುರಿ ಸಲಹೆ ಮಾಡಿದ್ದಾರೆ.

ಶ್ರೀ ಸಾಯಿರಾಂ ತಾಂತ್ರಿಕ ಮಹಾವಿದ್ಯಾಲಯದಲ್ಲಿ ನಡೆದ ಪ್ರಥಮ ವರ್ಷದ ಬಿ.ಇ ತರಗತಿಗಳ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು. ‘‘ಮನಸ್ಸಿಟ್ಟು ಓದಿದರೆ ಅಂಕಗಳನ್ನು ಗಳಿಸಬಹುದು. ಆದರೆ ಕೌಶಲ ಮತ್ತು ನಿಪುಣತೆಯನ್ನು ಸೂಕ್ಷ್ಮವಾಗಿ ಅರಿಯಬೇಕು. ಮಾನಸಿಕ ಸಂವೇದನೆಯ ಜತೆ ತಾಂತ್ರಿಕ ಆವಿಷ್ಕಾರಗಳನ್ನು ಗಮನಿಸುತ್ತಿದ್ದರೆ ಕೌಶಲ್ಯತೆ ಹೆಚ್ಚಿಸಿಕೊಳ್ಳಬಹುದು. ಮಾಡುವ ಕೆಲಸದಲ್ಲಿ ಶ್ರದ್ಧೆಯನ್ನು ಮೈಗೂಡಿಸಿಕೊಂಡು, ಹೆಸರುವಾಸಿ ವ್ಯಕ್ತಿಯಾಗಬೇಕೆಂಬ ಆಸೆಯಿಂದ ಕೆಲಸ ಮಾಡಿದರೆ ನಿಪುಣತೆ ಹೆಚ್ಚಿಸಿಕೊಳ್ಳಬಹುದು,’’ ಎಂದರು.

ಕಾಲೇಜಿನ ಪ್ರಾಂಶುಪಾಲ ಡಾ.ವೈ. ವಿಜಯಕುಮಾರ್ ಮಾತನಾಡಿದರು.

ಅಧಿಕ ಅಂಕ ಪಡೆದ 46 ವಿದ್ಯಾರ್ಥಿಗಳಿಗೆ ಸಂಸ್ಥೆಯ ಮುಖ್ಯಸ್ಥ ಲಿಯೋ ಮುತ್ತು 10 ಲಕ್ಷ ರೂ. ಮೊತ್ತದ ವಿದ್ಯಾರ್ಥಿ ವೇತನ ವಿತರಿಸಿದರು. ಆಡಳಿತ ಮಂಡಳಿ ಪ್ರತಿನಿಧಿ ಡಾ.ಅರುಣ್ ಕುಮಾರ್, ಪಟೇಲ್, ಉಪಪ್ರಾಂಶುಪಾಲ ಡಾ.ಷಡಕ್ಷರಪ್ಪ, ಎಲೆಕ್ಟ್ರಾನಿಕ್ಸ್ ವಿಭಾಗದ ಮುಖ್ಯಸ್ಥ ಶಿವಪ್ರಕಾಶ್, ಗಣಿತ ಮತ್ತು ವಿಜ್ಞಾನ ವಿಭಾಗದ ಮುಖ್ಯಸ್ಥೆ ಡಾ. ಗಂಗಾವತಿ ಹಾಜರಿದ್ದರು.



ಆನೇಕಲ್ ಸಮೀಪದ ಶ್ರೀ ಸಾಯಿರಾಂ ತಾಂತ್ರಿಕ ಮಹಾವಿದ್ಯಾಲಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ವಿತರಿಸಲಾಯಿತು.



MJF.LN. LEO MUTHU
Founder Chairman - Sairam Institutions
Sairam INSTITUTIONS